ಸಾಕ್ಷಿಯನ್ನು ದಿಃ01.12.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಹೆಚ್ ಬಿ ಆರ್ ವಕೀಲರಿಂದಃ**

ನಿಂಗಮ್ಮ ಸಿದ್ದವೀರಪ್ಪ ಮತ್ತು ನಂಜಮ್ಮನ ಮಗಳು ಎಂದು ತೋರಿಸುವ ದಾಖಲೆ ಹಾಜರು ಮಾಡಿಲ್ಲ. ನಿಡಿ-5 ನಾನು ಹೇಳಿ ಬರೆಸಿದ ದಾಖಲೆ ಎಂದರೆ ನಿಜ. ನಿಡಿ-5 ನ್ನು ಬರೆಸಲು ನಾನು ಗ್ರಾಮ ಲೆಕ್ಕಾಧಿಕಾರಿಗೆ ಯಾವುದೇ ದಾಖಲೆ ಕೊಟ್ಟಿರಲಿಲ್ಲ. ಇತ್ತೀಚೆಗೆ ಕಂದಾಯ ಇಲಾಖೆಯಿಂದ ಯಾವುದೇ ವಂಶವೃಕ್ಷ ಕೊಡುವ ಮುಂಚೆ ಸ್ಥಳ ಮಹಜರ್ ಮಾಡಿ ಸಂಬಂಧಪಟ್ಟವರ ಆಧಾರ್ ಕಾರ್ಡ್ ದಾಖಲೆಯನ್ನು ಪಡೆದು ನಂತರ ವಂಶವೃಕ್ಷ ಕೊಡುತ್ತಾರೆ ಎಂದರೆ ನಿಜ. ಆ ರೀತಿ ಹೊಸ ವಂಶವೃಕ್ಷ ಪಡೆದು ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

ಸರ್ವೆ ನಂ.161/ಪಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ನಾನು ಬಿ ಎ ಪದವೀಧರ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ನಿಡಿ-8 ರ ದಾಖಲೆ ಯನ್ನು ತೋರಿಸಿ ನೀವು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಅದನ್ನು ನೋಡಿ ಹೌದು ಎಂದು ಹೇಳುತ್ತಾರೆ. ಸದರಿ ದಾಖಲೆಯಲ್ಲಿ ಸರ್ವೆ ನಂ.161/ಪಿ ರ ಒಟ್ಟು ವಿಸ್ತೀರ್ಣ 69 ಎಕರೆ 5 ಗುಂಟೆ ಇದ್ದು ಆ ಪೈಕಿ 1 ಎಕರೆ 35 ಗುಂಟೆ ಖರಾಬು ಜಮೀನು ಇರುತ್ತದೆ. ಒಟ್ಟು 69 ಎಕರೆ ಪೈಕಿ ನಾನು 15 ಎಕರೆ ಜಮೀನು ಕೊಂಡಿದ್ದೇನೆ. ಈ ದಾವೆಯಲ್ಲಿ ಸಿದ್ದವೀರಪ್ಪ ಹೆಸರಿನಲ್ಲಿರುವ ಕ್ರಯ ಪತ್ರ ಹಾಜರು ಮಾಡಿದ ಬಗ್ಗೆ ಈಗ ನೆನಪಿಲ್ಲ.

ನನ್ನ ತಾಯಿ ನಿಂಗಮ್ಮ ಅನಕ್ಷರಸ್ಥಳು. ನನಗೆ ನಂದೀಶಪ್ಪ ಎಂಬ ಮಾವ ಇರುವುದಿಲ್ಲ. ಸದರಿ ನಂದೀಶಪ್ಪ ಗೌರಮ್ಮನ ಮಗ. ಗೌರಮ್ಮಗೆ ನಿಂಗಮ್ಮ ಮಗಳು ತರಹ ಆಗಬೇಕು.

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.